
# ಕಾನನ

ಸೆಪ್ಟೆಂಬರ್ 2019


ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



ಸೆಪ್ಟೆಂಬರ್ 2019

## ಲೇಖನಗಳು


* ಆನೆ – ಮಹದೇವ ಕೆ. ಸಿ.

* ಅಮೇಝಾನ್ ನಲ್ಲಿ ಕಾಡ್ಗಿಚ್ಚು – ಡಾ.ದೀಪಕ್ ಬಿ.

* ಬರಲಿದೆ ಹೊಸ ಶಿಲೀಂಧ್ರ ರೋಗ! – ಜೈಕುಮಾರ್ ಆರ್.

* ಪ್ರಕೃತಿಯ ಕೊಡುಗೆ (ಕವನ) – ಮಧುಸೂದನ ಹೆಚ್. ಸಿ.

* ಪ್ರಕೃತಿ ಬಿಂಬ – ವಿವೇಕ್ ಜಿ. ಎಸ್.
ವಿನೋದ್ ಕುಮಾರ್ ವಿ. ಕೆ.




© Alamy Live News


ವಿನ್ಯಾಸ
ಧನರಾಜ್ ಎಂ.

ಮುಖಪುಟ ಛಾಯಾಚಿತ್ರ
ನಾಗೇಂದ್ರ ಎನ್. ಬಿ.

ಪರಿಷ್ಕರಣೆ
ಮುರಳಿ ಎಸ್.
ಅನನ್ಯರೂಪ

ಕರಡು ತಿದ್ದುಪಡಿ
ಡಾ.ದೀಪಕ್ ಬಿ., ಮೈಸೂರು

# ಕರಿಜಾಲಿ

**ಸಾಮಾನ್ಯ ಹೆಸರು :** Bamoora

**ವೈಜ್ಞಾನಿಕ ಹೆಸರು :** Acacia nilotica subsp. indica



© ಅಶ್ವಥ ಕೆ. ಎನ್.

ಕರಿಜಾಲಿ ಹೂವು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ಕರಿಜಾಲಿಯು ಭಾರತ, ಶ್ರೀಲಂಕಾ ಸೇರಿದಂತೆ ಆಫ್ರಿಕಾದ ಕೆಲ ದೇಶಗಳಲ್ಲಿ ಹರಡಿದೆ. ಮುಟ್ಟಿದರೆ ಮುನಿ ಪ್ರಭೇದಕ್ಕೆ ಸೇರಿರುವ ಈ ಕರಿಜಾಲಿಯು 12 ಮೀಟರ್ ಎತ್ತರಕ್ಕೆ  ಹರಡುವ ದಟ್ಟವಾದ ಪೊದೆ. ಇದರ ಕಾಂಡಗಳು ಮತ್ತು ಕೊಂಬೆಗಳು ಸಾಮಾನ್ಯವಾಗಿ ಕಪ್ಪು ಬಣ್ಣ ಅಥವ ಕಪ್ಪು ಬಿಳಿ ಮಿಶ್ರಿತ ಬಣ್ಣದಿಂದ ಕೂಡಿದೆ. ಇದರ ರೆಂಬೆಗಳಲ್ಲಿ ಮುಳ್ಳುಗಳಿದ್ದು, ಈ ಮುಳ್ಳುಗಳನ್ನು ನಮ್ಮ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳಿಗೆ ಕಿವಿ ಹಾಗೂ ಮೂಗನ್ನು ಚುಚ್ಚಲು ಉಪಯೋಗಿಸುತ್ತಾರೆ. ಇದರ ಒರಟಾದ ತೊಗಟೆಗಳು ಬಿರುಕುಬಿಟ್ಟು ಕೆಂಪುಬಣ್ಣದ ಅಂಟನ್ನು ಒಸರುತ್ತವೆ. ಈ ಅಂಟನ್ನು "ಗಮ್ ಅರೇಬಿಕ್" ಎಂದು, ಭಾರತದಲ್ಲಿ "ಅಮರಾವತಿ ಗಮ್" ಎಂದೂ ಕರೆಯಲಾಗುತ್ತದೆ. ಈ ಪೊದೆಯು ಹೂ ಬಿಟ್ಟಾಗ ದೂರದಿಂದ ಹಳದಿಯ ಚಂಡಂತೆ ಕಾಣುತ್ತದೆ. ಕಾರಣ ಇದರ ಹೂ ಕೂಡ ಹಳದಿ ಬಣ್ಣದ ಗೋಳಾಕಾರದಲ್ಲಿ ಗೊಂಚಲು ಗೊಂಚಲಾಗಿ ಕಾಣಸಿಗುತ್ತದೆ, ಇದರ ಹೂಗಳನ್ನು ಔಷಧಿಗಾಗಿ ಮತ್ತು ಬಣ್ಣ ತಯಾರಿಸಲು ಸಂಗ್ರಹಿಸಲಾಗುತ್ತದೆ. ನೋಡಲು ಹುಣಸೆ ಕಾಯಿಯ ಹಾಗೆ ಜೋಡಿಸಿದಂತೆ ಇರುವ ಇದರ ಬೀಜಗಳು ಗೊಂಚಲಾಗಿ ಜೋತುಬಿದ್ದಿರುತ್ತವೆ. ಇದರ ಕಾಂಡವನ್ನು ದೋಣಿಗಳ ತಯಾರಿಕೆಗೆ ಬಳಸಲಾಗುತ್ತದೆ.




# ಆನೆ

ಕಾಡಂಚಿನಲ್ಲಿದ್ದ ನಮ್ಮ ಜಮೀನಿನಲ್ಲೆ ವಾಸಿಸುತ್ತಿದ್ದರಿಂದ ಕಾಡುಪ್ರಾಣಿಗಳಿಗೂ ನಮಗೂ ಆಗಾಗ ಮುಖಾಮುಖಿಯಾಗುತ್ತಿತ್ತು. ಸಂಜೆಯಾಗುತ್ತಿದ್ದಂತೆ ಕಾಡಂಚಿಗೆ ಬರುತ್ತಿದ್ದ ನರಿಗಳ ಊಳು ಕಾಡನ್ನ ಪ್ರತಿಫಲಿಸುತ್ತಿತ್ತು. ಮೊಲ-ಕಾಡುಹಂದಿಗಳು ಹೊಲದಲ್ಲಿನ ಬೆಳೆಯನ್ನರಿಸಿ ಬರುತ್ತಿದ್ದವು, ಅಂತೆಯೇ ಆನೆಗಳೂ ಬರುತ್ತಿದ್ದವು. ಅವುಗಳ ತಪ್ಪೇನಿಲ್ಲ, ಹಿಂದೆ ನಮ್ಮ ಪೂರ್ವಜರು ಇಲ್ಲಿದ್ದ ಕಾಡನ್ನ ಕಡಿದು ಆಕ್ರಮಿಸಿಕೊಂಡು ಜಮೀನುಗಳಾಗಿ ಮಾಡಿಕೊಂಡಿದ್ದು ಇಂದು ಅದನ್ನೇ ನಾವು ಅವಲಂಬಿಸಿದ್ದೇವೆ ಅಷ್ಟೆ. ಆದ್ದರಿಂದ ಜಮೀನುಗಳಿಗೆ ಆನೆ, ಕಾಡುಹಂದಿಗಳು ಬರುವುದು ನಮ್ಮೂರಿನ ಸುತ್ತಮುತ್ತ ಮಾಮೂಲಿ ವಿಷಯವಾಗಿ ಹೋಗಿತ್ತು.

ಅಂದು ಸಂಜೆ ಆರರ ಸಮಯ ಆಗತಾನೆ ಸೂರ್ಯ ಪಶ್ಚಿಮದಲ್ಲಿ ಮುಳುಗಿದ್ದ. ಕತ್ತಲು ಬೆಳಕನ್ನು ಬಲವಂತವಾಗಿ ಆವರಿಸುವಂತಿತ್ತು, ಮಬ್ಬುಮಬ್ಬಾಗಿ ಎಲ್ಲವೂ ಕಾಣುತ್ತಿತ್ತು. ನಾನು ಏನೋ ಕೆಲಸದ ನಿಮಿತ್ತ ಊರಕಡೆಗೆ ಹೆಜ್ಜೆ ಹಾಕಿದೆ. ಮೂರ್ನಾಲ್ಕು ಫರ್ಲಾಂಗು ನಡೆದಿರಬೇಕು. ರಸ್ತೆಯ ಪಕ್ಕದಲ್ಲೆ ಲೊಟಕ್ಕನೆ ಕೊಂಬೆ ಮುರಿದ ಸದ್ದಾಯ್ತು. ಈ ಶಬ್ಧ ಕಿವಿಗೆ ಬಿದ್ದ ತಕ್ಷಣವೇ ನನಗರಿವಿಲ್ಲದೇ ನನ್ನ ಕಾಲುಗಳು ಓಡಲಾರಂಭಿಸಿದವು. ಕ್ಷಣಾರ್ಧದಲ್ಲಿ ಮನೆ ಸೇರಿ ಮನೆಯಲ್ಲಿದ್ದ ಟಾರ್ಚ್ ತೆಗೆದುಕೊಂಡು ಹೊರಬಂದು ನೋಡಿದೆ. ಮೂರು ದೈತ್ಯ ಆನೆಗಳು ರಸ್ತೆ ದಾಟಿ ಆಗ ತಾನೆ ನಮ್ಮ ಜಮೀನಿನ ಒಳಕ್ಕೆ ಬಂದು ನಿಂತಿದ್ದವು. ಟಾರ್ಚ್ ಬೆಳಕಿಗೆ ಚಕಿತವಾದ ಆನೆಗಳು ಮುಂದೆ ಸಾಗಿ ಕತ್ತಲಲ್ಲಿ ಲೀನವಾಗಿ ಹೋದವು. ಒಂದೆರಡು ನಿಮಿಷದಲ್ಲಿ ನಮ್ಮ ಜಮೀನಿನಿಂದ ಸುಮಾರು ದೂರದಲ್ಲಿ ಆನೆಗಳು ಹೋದ ದಿಕ್ಕಿಗೆ ಟಿಟ್ಟಿಭಗಳು ಕೂಗಲಾರಂಭಿಸಿದವು. ಆಗ ನಮ್ಮ ತಂದೆ "ಹೋ ಕಂಟಪ್ಪನ್ ಕೆರೆ ಸೇರ್ಕೊಂಡ್ವು ಬಿಡು" ಎಂದರು. ಮರಳಿ ಮನೆ ಸೇರಿದೆವು.




ನನಗೆ ಚಿಕ್ಕಂದಿನಿಂದಲು ನಮ್ಮ ತಂದೆ ಈ ಆನೆಗಳ ಹಾವಭಾವಗಳ ಬಗ್ಗೆ ಆಗಾಗ ಹೇಳಿಕೊಡುತ್ತಿದ್ದರು. ಆನೆಗಳು ಸುಮ್ಮನೆ ಒಂದೆಡೆ ನಿಲ್ಲೋದಿಲ್ಲ, ನಿಂತರೂ ಅವು ಕಿವಿಯನ್ನಾದರು ಪಟ ಪಟ ಎಂದು ಆಡಿಸುತ್ತವೆ, ಅಥವಾ ಕಡ್ಡಿ, ರೆಂಬೆ ಏನಾದರೊಂದು ಮುರಿಯುತ್ತಿರುತ್ತವೆ. ಹಾಗೂ ಆನೆ ಎದುರಾದಾಗ ಏನು ಮಾಡಬೇಕು, ಹೀಗೆ.. ಇದರ ಪರಿಣಾಮವಾಗಿಯೇ ಅಂದು ಕೊಂಬೆ ಮುರಿದ ಶಬ್ಧಕ್ಕೆ ಇದು ಆನೆಯಿರಬಹುದೆಂದು ನಾನು ಊಹಿಸಿದ್ದೆ. ಆನೆ ಎಂದೊಡನೆ ಎಲ್ಲರಲ್ಲೂ ಒಂದು ದೈತ್ಯ, ಬಿಳಿದಂತ, ಅಗಲ ಕಿವಿ, ಹೀಗೆ ಹಲವಾರು ವಿಷಯಗಳು ಮನಸಿನಲ್ಲಿ ಮೂಡುವುದು ಸಹಜ. ನಮ್ಮ ವಿಶ್ವದಲ್ಲಿ ಮುಖ್ಯವಾಗಿ ಎರಡು ಪ್ರಭೇದದ ಆನೆಗಳನ್ನ ನೋಡಬಹುದು. ಆಫ್ರಿಕಾ ಆನೆಗಳು ಹಾಗೂ ಏಷ್ಯಾ ಆನೆಗಳು. ಈ ಎರಡೂ ಪ್ರಭೇದದ ಆನೆಗಳನ್ನು ಅವುಗಳ ದಂತ ಹಾಗೂ ತಲೆ ಬುರುಡೆಯ ಗಾತ್ರದ ಆಧಾರದ ಮೇಲೆ ವಿಂಗಡಿಸಿದರೂ ಅವುಗಳ ಆಹಾರ ಕ್ರಮ ಹಾಗೂ ಜೀವನ ಶೈಲಿ ಒಂದೇ ಆಗಿದೆ. ಆದರೆ ಈ ಆಫ್ರಿಕಾದ ಆನೆಗಳಲ್ಲಿ ಗಂಡು ಮತ್ತು ಹೆಣ್ಣು ಆನೆಗಳೆರಡಕ್ಕೂ ದಂತವಿರುತ್ತದೆ.

ಏಷ್ಯಾದ ಆನೆ ಅಥವಾ ಭಾರತದ ಆನೆ (Elephas maximus indicus ) ಆಫ್ರಿಕನ್ ಆನೆಗಿಂತ ಗಾತ್ರದಲ್ಲಿ ಸಣ್ಣದು. ಅಲ್ಲದೆ ಗಂಡಾನೆಗಳು ಮಾತ್ರ ದೊಡ್ಡದಾದ ದಂತಗಳನ್ನು ಹೊಂದಿರುತ್ತವೆ. ಇಂದು ಭೂಮಿಯ ಮೇಲೆ ಸುಮಾರು 60,000 ಏಷ್ಯಾದ ಆನೆಗಳಿವೆ. ಇವುಗಳ ಪೈಕಿ 30,000ದಿಂದ 50000 ದಷ್ಟು ಆನೆಗಳು ಕಾಡಿನಲ್ಲೂ ಮತ್ತು ಸುಮಾರು 10,000 ದಷ್ಟು ಆನೆಗಳು ಪಳಗಿಸಲ್ಪಟ್ಟು ನಾಡಿನಲ್ಲೂ ಇವೆಯೆಂದು ಒಂದು ಅಂದಾಜು.
ಆನೆಗಳು ಬೃಹತ್ ಪ್ರಮಾಣದ ಸಸ್ಯಾಹಾರಿಗಳು, ಸಂಶೋಧಕರ ಪ್ರಕಾರ ಮುಖ್ಯವಾಗಿ ಹುಲ್ಲು, ಬಿದಿರು, ಮರದತೊಗಟೆ ಇವುಗಳ ಮುಖ್ಯ ಆಹಾರವಾಗಿದ್ದು, ಒಂದು ಆನೆಗೆ ದಿನಕ್ಕೆ ಸರಿ ಸುಮಾರು 150 ಕೆಜಿ ಆಹಾರ ಬೇಕು ಎಂದು ಅಂದಾಜಿಸಲಾಗಿದೆ. ನಾವು ಆನೆಯ ಲದ್ದಿಯನ್ನು ಗಮನಿಸಿದರೆ ಅದು ಹೆಚ್ಚು ನಾರುನಾರಾಗಿದ್ದು ಆನೆ ಸೇವಿಸಿದ ಆಹಾರ ಸಂಪೂರ್ಣವಾಗಿ ಜೀರ್ಣವಾಗದೇ ಇರುವ ಕಾರಣ, ಇವು ಹೆಚ್ಚು ಹೆಚ್ಚು ಆಹಾರ ಸೇವಿಸಬೇಕಾದುದು ಅನಿವಾರ್ಯ, ಹಾಗಾಗಿ ಹೆಚ್ಚು ಪ್ರಮಾಣದ ಆಹಾರಕ್ಕಾಗಿ ಅವುಗಳು ಅಲೆದಾಡುತ್ತವೆ.

ದಕ್ಷಿಣ ಭಾರತದಾದ್ಯಂತ 1,130 km2 (440 sq mi) ನಲ್ಲಿ ನಡೆದ ಅಧ್ಯಯನವೊಂದರಲ್ಲಿ ಆನೆಗಳು, ಸುಮಾರು 112 ಪ್ರಭೇದದ ವಿವಿಧ ಸಸ್ಯಗಳನ್ನು ಆಹಾರವಾಗಿ ಬಳಸಿರುವುದು ಕಂಡುಬರುತ್ತದೆ. ಆನೆಗಳು ಸಾಮಾನ್ಯವಾಗಿ ಬಿದಿರು ದ್ವಿದಳ ಧಾನ್ಯದ ಸಸ್ಯ, ತಾಳೆಮರ, ಜೊಂಡುಹುಲ್ಲನ್ನು ತಿನ್ನುತ್ತವೆ. ಅವು ಬಹುತೇಕ

ಎತ್ತರವಾಗಿ ಬೆಳೆದ ಹುಲ್ಲುಗಾವಲುಗಳಲ್ಲಿ ಹೆಚ್ಚಾಗಿ ಮೇಯುತ್ತವೆ, ಅವುಗಳ ಆಹಾರ ಸೇವಿಸುವ ಪ್ರಮಾಣವು ಆಯಾ ಋತುಮಾನದ ಮೇಲೆ ನಿಗದಿಯಾಗಿರುತ್ತದೆ. ಏಪ್ರಿಲ್ ತಿಂಗಳುಗಳಲ್ಲಿ ಸಾಮಾನ್ಯವಾಗಿ ಹೊಸಹುಲ್ಲು ಬೆಳೆಯುತ್ತದೆ, ಆಗ ಅವು ಪೊದೆಗಳಲ್ಲಿ ಮೇಯುತ್ತವೆ. ಹುಲ್ಲು ಎತ್ತರವಾಗಿದ್ದರೆ 0.5 m (1.6 ft) ಆಗ ಅವು ಇಡೀ ಪೊದೆಯನ್ನೇ ಬುಡಸಮೇತ ಕಿತ್ತು  ಸೊಂಡಿಲಿನಲ್ಲಿ ಹಿಡಿದು ಕಾಲಿಗೆ ಹುಲ್ಲನ್ನು ಹೊಡೆದುಕೊಳ್ಳುತ್ತಾ ಅದರ ಮಣ್ಣಿನ ಭಾಗ ಮತ್ತು ಬೇರನ್ನು ಜಾಣತನದಿಂದ ತೆಗೆದು ತಿನ್ನುತ್ತವೆ. ಬಿದಿರಿನಿಂದ ಎಳೆಯ ಕಾಂಡದ ಭಾಗ, ಪಾರ್ಶ್ವದ ಸಸ್ಯಭಾಗ ಮತ್ತು ಸಣ್ಣ ಕೊಂಬೆಗಳನ್ನು ತಿನ್ನುತ್ತವೆ.. ಋತುಮಾನಗಳಿಗನುಸಾರ ಆನೆಗಳು ವಲಸೆ ಹೋಗುತ್ತವೆ. ಈಗ ನಮ್ಮ ಬನ್ನೇರುಘಟ್ಟ, ಬಂಡೀಪುರ, ನಾಗರಹೊಳೆ ಮೊದಲಾದ ಕಾಡುಗಳು ಕುರುಚಲು ಹಾಗು ಎಲೆಉದುರುವ ಕಾಡುಗಳಾಗಿದ್ದು, ಬೇಸಿಗೆಯಲ್ಲಿ ಈ ಕಾಡುಗಳು ಸಂಪೂರ್ಣವಾಗಿ ಒಣಗಿ ಹೋಗುವ ಕಾರಣ, ಆನೆಯಂತಹ ದೈತ್ಯ ಸಸ್ಯಹಾರಿಗಳಿಗೆ ಬೇಕಾಗುವಷ್ಟು ಆಹಾರ ನೀರು ದೊರೆಯುವುದಿಲ್ಲ. ಹಾಗಾಗಿ ಆನೆಗಳು ವಲಸೆ ಹೋಗುವುದು ಸಾಮಾನ್ಯ.

ನಮ್ಮ ಕರ್ನಾಟಕದಲ್ಲಿ ಮುಖ್ಯವಾಗಿ ಬಂಡೀಪುರ ಹಾಗೂ ಸುತ್ತಮುತ್ತಲಿನ ಕಾಡಿನಲ್ಲಿರುವ ಆನೆಗಳು ಕಬಿನಿಯ ಹಿನ್ನೀರಿಗೆ ಪ್ರತೀವರ್ಷ ವಲಸೆ ಬರುತ್ತವೆ. ಕಪಿಲ ನದಿಗೆ ಅಡ್ಡಲಾಗಿ ಕಟ್ಟಿರುವ ಕಬಿನಿ ಜಲಾಶಯದ ಹಿನ್ನಿರು ನಾಗರಹೊಳೆ ಕಾಡಿನಲ್ಲೇ ಇರುವುದರಿಂದ ಹಿನ್ನೀರಿನಲ್ಲಿ ಆನೆಗಳಿಗೆ ಬೇಸಿಗೆಯಲ್ಲೂ ಹುಲ್ಲು, ನೀರು ಯಥೇಚ್ಛವಾಗಿ ದೊರೆಯುತ್ತದೆ. ಆನೆಗಳಿಗೆ ನೆನಪಿನ ಶಕ್ತಿ ಹೆಚ್ಚು. ಅಧ್ಯಯನದ ಪ್ರಕಾರ ಆನೆಗಳ ವಲಸೆ ಹೋಗುವ ದಾರಿಯನ್ನ ಆನೆ ಕಾರೀಡಾರ್ ಎಂದು ಗುರುತಿಸುತ್ತಾರೆ. ಯಾವುದಾದರೊಂದು ಆನೆಯ ಗುಂಪು ಹೊಸ ದಾರಿಯಲ್ಲಿ ಆಹಾರವನ್ನರಸಿ ವಲಸೆ ಹೋಯಿತೆಂದರೆ ಆ ಗುಂಪಿನ ಮುಂದಿನ ಪೀಳಿಗೆಯೂ ಅದೇ ದಾರಿಯನ್ನ ಹಿಡಿಯುತ್ತವೆ. ಈ ಮಾಹಿತಿ ತಲೆಮಾರಿನಿಂದ ತಲೆಮಾರಿಗೆ ವಂಶವಾಹಿಯಾಗಿ ಬಂದಿರುತ್ತದೆ.



ಆನೆಗಳು ಒಂದು ವ್ಯವಸ್ಥಿತವಾಗಿ ಬದುಕುವ ಸಾಮಾಜಿಕ ಪ್ರಾಣಿಗಳು. ಗಂಡಿನ ಮತ್ತು ಹೆಣ್ಣಿನ ಸಾಮಾಜಿಕ ಜೀವನಗಳು ಒಂದಕ್ಕೊಂದು ವಿಭಿನ್ನ. ಹೆಣ್ಣಾನೆಗಳು ತಮ್ಮ ಸಂಪೂರ್ಣ ಜೀವನವನ್ನು ಗುಂಪುಗಳಲ್ಲಿಯೇ ಕಳೆಯುತ್ತವೆ. ಈ ಗುಂಪುಗಳು ಕೇವಲ ಹೆಣ್ಣಾನೆಗಳನ್ನು ಮಾತ್ರ ಒಳಗೊಂಡಿದ್ದು ತಾಯಿ, ಮಗಳು, ಸಹೋದರಿಯರು, ಸೋದರತ್ತೆ ಮತ್ತು ಚಿಕ್ಕಮ್ಮಂದಿರನ್ನು ಒಳಗೊಂಡಿರುತ್ತದೆ. ಗುಂಪಿನಲ್ಲಿ ಅತಿ ಹೆಚ್ಚು ವಯಸ್ಸಾದ ಆನೆಯು ಈ ಕುಟುಂಬದ ಯಜಮಾನಿಯಾಗಿ ಗುಂಪನ್ನು ಮುನ್ನಡೆಸುತ್ತಾಳೆ. ವಯಸ್ಸಾದ ಗಂಡಾನೆಗಳು ಸಾಮಾನ್ಯವಾಗಿ ಒಂಟಿಯಾಗಿಯೇ ಬಾಳುತ್ತವೆ. ಹೆಣ್ಣಾನೆಯ ಸಾಮಾಜಿಕ ವಲಯವು ತನ್ನ ಸಣ್ಣ ಕುಟುಂಬಕ್ಕೇ ಸೀಮಿತವಾಗಿರುವುದಿಲ್ಲ. ತನ್ನ ಗುಂಪಿನ ಆಸುಪಾಸಿನಲ್ಲಿ ಸುಳಿದಾಡುವ ಗಂಡಾನೆಗಳು ಮತ್ತು ಇತರ ಗುಂಪುಗಳೊಡನೆಯೂ ಸಂಪರ್ಕದಲ್ಲಿರುತ್ತವೆ. ಗಂಡಾನೆಗಳು ಹೆಚ್ಚಿನ ಸಮಯವನ್ನು ತಮ್ಮ ಪ್ರಾಬಲ್ಯ ಸಾಧಿಸುವುದಕ್ಕಾಗಿ ಇತರ ಗಂಡಾನೆಗಳೊಡನೆ ಕಾದಾಡುವುದರಲ್ಲಿಯೇ ಕಳೆಯುವುವು. ಆನೆಗಳ ವಂಶಾಭಿವೃದ್ಧಿ ಪ್ರಕ್ರಿಯೆಯ ದೃಷ್ಟಿಯಲ್ಲಿ ಇದು ಅವಶ್ಯ, ಕೇವಲ ಪ್ರಬಲ ಗಂಡಾನೆಗಳಿಗೆ ಮಾತ್ರ ಹೆಣ್ಣಾನೆಗಳೊಂದಿಗೆ ಸಂಗಮಿಸುವ ಅವಕಾಶವಿರುವುದು. ಉಳಿದವು ತಮ್ಮ ಸರದಿಗಾಗಿ ಕಾಯಲೇಬೇಕು. ಸಾಮಾನ್ಯವಾಗಿ 40 ರಿಂದ 50 ವರ್ಷ ವಯಸ್ಸಾಗಿರುವ ಬಲಿಷ್ಟ ಗಂಡಾನೆಗಳು ಹೆಚ್ಚಿನ ವಂಶಾಭಿವೃದ್ಧಿಯ ಕಾರ್ಯ ನಡೆಸುತ್ತವೆ.




9 ರಿಂದ 12ನೆಯ ವಯಸ್ಸಿಗೆ ಲೈಂಗಿಕವಾಗಿ ಪ್ರೌಢಾವಸ್ಥೆಯನ್ನು ತಲುಪುವ ಹೆಣ್ಣಾನೆಗಳು, ಸುಮಾರು 12 ನೆಯ ಪ್ರಾಯದಲ್ಲಿ ಮೊದಲ ಬಾರಿಗೆ ಗರ್ಭವತಿಯಾಗುತ್ತವೆ. ಇವು 55 ರಿಂದ 60 ನೆಯ ವಯಸ್ಸಿನವರೆಗೂ ಹೆರಬಲ್ಲುವು. ಆನೆಗಳಲ್ಲಿ ಪ್ರತಿ ಹೆರಿಗೆಯ ಮಧ್ಯೆ ಸುಮಾರು 5 ವರ್ಷಗಳ ಅಂತರವಿರುತ್ತದೆ. ಆನೆಯ ಗರ್ಭಧಾರಣೆಯ ಅವಧಿ ಸುಮಾರು 22 ತಿಂಗಳು. ಈ ಅವಧಿ ಇತರ ಯಾವುದೇ ಪ್ರಾಣಿಗಿಂತ ಹೆಚ್ಚು. ಆನೆಯು ಒಂದು ಬಾರಿಗೆ ಒಂದು ಮರಿಗೆ ಮಾತ್ರ ಜನ್ಮವೀಯುವುದು. ವಯಸ್ಕ ಗಂಡಾನೆಗಳು ನಿಯತವಾಗಿ ಮದವೇರಿದ ಸ್ಥಿತಿಯನ್ನು ತಲುಪುತ್ತವೆ. ಇದಕ್ಕೆ ಮಸ್ತ್ (ಹಿಂದಿ ಭಾಷೆಯ ಪದ)ಎಂದು ಹೆಸರು. ಇಂತಹ ಸಮಯದಲ್ಲಿ ಆನೆಯು ಅತ್ಯಂತ ಉನ್ಮತ್ತಾವಸ್ಥೆಯಲ್ಲಿದ್ದು ತೀವ್ರ ಆಕ್ರಮಣಕಾರಿ ಪ್ರವೃತ್ತಿ ತೋರುವುವು. ಅಲ್ಲದೆ ತಲೆಯ ಪಾರ್ಶ್ವಗಳಲ್ಲಿರುವ ಗ್ರಂಥಿಗಳಿಂದ ಒಂದು ವಿಶಿಷ್ಟ ದ್ರವ ಸ್ರವಿಸುತ್ತಿರುತ್ತದೆ. ಮದೋನ್ಮತ್ತ ಆನೆಯು ಅತಿ ಅಪಾಯಕಾರಿಯಾಗಿದ್ದು ಇದರ ನಿಯಂತ್ರಣ ಸಾಧ್ಯವಿಲ್ಲ. ಪಳಗಿಸಿದ ಆನೆಗಳಲ್ಲಿ ಮದವೇರುವ ಸೂಚನೆ ಕಂಡ ಕೂಡಲೇ ಇವುಗಳನ್ನು ಭದ್ರವಾಗಿ ಒಂದು ಮರಕ್ಕೆ ಕಟ್ಟಿಹಾಕಿ ಮದವಿಳಿಯುವವರೆಗೂ ಆಹಾರ ಮತ್ತು ನೀರನ್ನು ನೀಡಲಾಗುವುದಿಲ್ಲ. ಈ ಮದವೇರುವ ವಿದ್ಯಮಾನ ಸಾಮಾನ್ಯವಾಗಿ ತರುಣ ಗಂಡಾನೆಗಳಲ್ಲಿ ಕಾಣಿಸುವುದು.

ಈ ಆನೆಗಳಲ್ಲಿಯೂ ನಾವು ಭಾವನೆಗಳನ್ನ ಕಾಣಬಹುದು. ಗುಂಪಿನಲ್ಲಿರುವ ಮರಿ ಆನೆಗಳಿಗೆ ಆ ಮರಿಯ ತಾಯಿಯಲ್ಲದೇ ಬೇರೆ ಹೆಣ್ಣು ಆನೆಗಳು ಪೋಷಿಸುತ್ತವೆ ಹಾಗೂ ಹಾಲುಣಿಸುತ್ತವೆ. ಯಾವುದಾದರೂ ಮರಿ ತನ್ನ ತಾಯಿಯನ್ನ ಕಳೆದುಕೊಂಡರೆ ಉಳಿದ ಹೆಣ್ಣುಗಳು ಆ ಮರಿಯನ್ನ ಪೋಷಿಸುತ್ತವೆ. ಬೃಹದಾಕಾರದ ಆನೆಗಳಿಗೆ ಅತೀ ವಿಸ್ತಾರವಾದ ಕಾಡಿನ ಅವಶ್ಯಕತೆಯಿದೆ. ಆದರೆ ನಾವು ನಗರೀಕರಣ ಹಾಗು ಜನಸಂಖ್ಯೆ ಹೆಚ್ಚಳದಿಂದ ಕಾಡುಗಳನ್ನೆಲ್ಲ ಕಡೆದು ನಾಶ ಮಾಡಿರುವ ಪರಿಣಾಮವಾಗಿ ಇಂದು ಆನೆಗಳು ಕಾಡಿನಲ್ಲುಳಿಯದೆ ನಗರಕ್ಕೆ ಬಂದಿವೆ ಎಂದು ಬೊಬ್ಬೆ ಹೊಡೆಯುತ್ತಿದ್ದೇವೆ. ವಂಶವಾಹಿಯಾಗಿ ಆನೆಗಳಿಗೆ ಅವುಗಳು ಸಂಚರಿಸಬೇಕಾದ ದಾರಿಯ ಚಿತ್ರಣ ಬಂದಿರುತ್ತದೆ. ಆದರೆ ನಾವು ಕಾಡನ್ನ ಕಡೆದು ಆನೆದಾರಿಗಳನ್ನು ಹಾಳುಮಾಡಿ ಅಭಿವೃದ್ಧಿಗೊಳಿಸಿಬಿಟ್ಟಿದ್ದೇವೆ. ಹೀಗಾಗಿ ಆನೆಗಳಿಗೆ ಕಾಡಿನಿಂದ ಕಾಡಿಗೆ ಆಹಾರವನ್ನರಸಿ ವಲಸೆ ಹೋಗಲಾಗದೆ ಪರಿತಪಿಸಬೇಕಾಗಿದೆ. ಇದು ಸ್ವಾಭಾವಿಕ ಅರಣ್ಯದ ನೈಸರ್ಗಿಕ ಆವಾಸಗಳ ಮೇಲೆ ಅತೀವ ಪರಿಣಾಮ ಬೀರುವುದು.

ಆನೆಗಳ ಆವಾಸವನ್ನ ಹಾಳು ಮಾಡಿದ್ದಲ್ಲದೇ ಅವುಗಳ ದಂತಕ್ಕಾಗಿ ಬೇಟೆಯಾಡುತ್ತಾರೆ. ಒಂದು ಅಧ್ಯಯನದ ಪ್ರಕಾರ ಆಫ್ರಿಕಾ ಆನೆಗಳನ್ನ ದಂತಚೋರರು ಕೇವಲ ದೊಡ್ಡ ದಂತವುಳ್ಳ ಆನೆಗಳನ್ನು ಬೇಟೆಯಾಡಿರುವ ಪರಿಣಾಮ ಒಂದು ವಿಶಿಷ್ಟ ಪರಿಸ್ಥಿತಿಯುಂಟಾಗಿ ಹೆಣ್ಣಾನೆಗಳು ಸಂತಾನಕ್ಕಾಗಿ ಚಿಕ್ಕ ದಂತವುಳ್ಳ ಅಥವಾ ದಂತವೇ ಇಲ್ಲದ ಗಂಡಾನೆಗಳನ್ನು ಕೂಡಬೇಕಾದ ಪರಿಸ್ಥಿತಿಗೆ ಕಾರಣವಾಯಿತು. ಈ ಪ್ರಕ್ರಿಯೆ ದಶಕಗಳ ಕಾಲ ಮುಂದುವರಿದು ಆನೆಗಳ ವಂಶವಾಹಿಯಲ್ಲಿ ಅನೇಕ ಬದಲಾವಣೆಯನ್ನುಂಟುಮಾಡಿತು. ಇಂದು ಜನಿಸುವ ಆನೆಗಳಲ್ಲಿ 30%ರಷ್ಟಕ್ಕೆ ದಂತಗಳು ಮೊಳೆಯುವುದೇ ಇಲ್ಲ. ಒಂದೊಮ್ಮೆ ಇದು ತೀರಾ ಅಪರೂಪದ ವಿದ್ಯಮಾನವಾಗಿದ್ದು, ಇಂದು ಸಹಜ ಸಾಮಾನ್ಯವಾಗಿದೆ. ಆನೆಗಳು ತಮ್ಮ ದಂತಗಳನ್ನು ಹಲವು ಬಗೆಯಲ್ಲಿ ಉಪಯೋಗಕ್ಕೆ ತಂದುಕೊಳ್ಳುವುದರಿಂದ ದಂತಹೀನ ಆನೆಗಳು ತಮ್ಮ ಸಹಜ ಜೀವನದ ವಿಧಾನವನ್ನು ಬಹಳವಾಗಿ ಬದಲಾಯಿಸಿಕೊಳ್ಳಬೇಕಾಗುವುದು. ಮುಂದೊಮ್ಮೆ ಆನೆಗಳ ಜೀವನಶೈಲಿ ಬಹುಶಃ ಸಂಪೂರ್ಣವಾಗಿ ಬೇರೆಯಾಗಿಬಿಡಬಹುದು!

ಅನಾದಿಕಾಲದಿಂದಲೂ ಮಾನವನಿಗೆ ಆನೆಯು ಒಂದು ಪ್ರತಿಷ್ಠೆಯ ಸಂಕೇತವಾಗಿದೆ. ಅಂದಿನ ಭಾರತದ ಅರಸರ ಪಟ್ಟದಾನೆಯು ಸಮಾಜದಲ್ಲಿ ಅತಿ ಗೌರವಾನ್ವಿತ ಸ್ಥಾನವನ್ನು ಹೊಂದಿತ್ತು. ಸೈನ್ಯದ ಶಕ್ತಿಯು ಗಜಬಲವನ್ನು ಹೆಚ್ಚಾಗಿ ಅವಲಂಬಿಸಿತ್ತು. ಉಳಿದಂತೆ, ಆನೆಯನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳಲ್ಲಿ ಬಳಸುವ ವಾಡಿಕೆ ಇಂದಿಗೂ ಇದೆ. ದಕ್ಷಿಣ ಭಾರತದ ಬಹಳಷ್ಟು ದೇವಸ್ಥಾನಗಳು ತಮ್ಮದೇ ಆನೆಯನ್ನು ಸಾಕಿಕೊಂಡಿವೆ. ಮೈಸೂರಿನ ದಸರಾ ಹಾಗೂ ಕೇರಳದ ತ್ರಿಶ್ಶೂರಿನ ಪೂರಮ್ ಉತ್ಸವ ಆನೆಗಳೇ ಕೇಂದ್ರವಾಗುಳ್ಳ ಒಂದು ಅತ್ಯಾಕರ್ಷಕವಾದ ಉತ್ಸವ.

**“ ಒದುಗರೆಲ್ಲರಿಗೂ ಗೌರಿ-ಗಣೇಶ ಹಬ್ಬದ ಶುಭಾಶಯಗಳು”**



- ಮಹದೇವ ಕೆ. ಸಿ.
ಡಬ್ಲ್ಯೂ.ಸಿ.ಜಿ., ಬೆಂಗಳೂರು.

# ಅಮೇಝಾನ್ ನಲ್ಲಿ ಕಾಡ್ಗಿಚ್ಚು



ಬೆಳಗಿನ ಸಮಯದಲ್ಲಿ ಮಳೆಕಾಡುಗಳ ಚಿತ್ರಣ ಹೇಗಿರುತ್ತದೆಂದರೆ, ಮೇಲಿನ ಚಪ್ಪರದಲ್ಲಿ ನೀರು ಜಿನುಗುವ ಜರೀ ಗಿಡಗಳು ಆರ್ಕಿಡ್ ಗಳು, ಮರದ ಕಾಂಡದ ಮೇಲೆ ಪಾಚಿಯ ಹಾಸು, ಕಲ್ಲುಹೂಗಳು, ಸೂರ್ಯನ ಬೆಳಕು ಬಿದ್ದಹಾಗೆ ಮೆಲ್ಲನೆ ಕರಗಿ ಹೋಗುವ ಇಬ್ಬನಿ, ಇಂಥ ಪರಿಸರದಲ್ಲಿ ಸುಟ್ಟುಹೋಗುವಂತಹ ಸಾಕಷ್ಟು ಎಲೆಗಳಿದ್ದರೂ ಅವು ತೇವದಿಂದ ಕೂಡಿದ್ದು, ಬೆಂಕಿಯನ್ನು ಊಹಿಸಲೂ ಅಸಾಧ್ಯ ಹಾಗೂ ಇಂತಹ ಸ್ಥಳಗಳಲ್ಲಿ ಮನುಷ್ಯನ ಕೈವಾಡವಿಲ್ಲದೇ ಎಂದೂ ಬೆಂಕಿ ಬೀಳುವುದಿಲ್ಲ.  ಕಲ್ಲಿದ್ದಲು ಮಾಪಕದಲ್ಲೂ ಕೂಡ ಅಮೇಝಾನ್ ಕಾಡುಗಳಲ್ಲಿ ಕಾಳ್ಗಿಚ್ಚು ಬಿದ್ದ ದಾಖಲೆ ಇಲ್ಲ.  ಕೊಲಂಬಸ್ ಅಮೇರಿಕಾವನ್ನು ಕಂಡುಹಿಡಿಯುವುದಕ್ಕೂ ಮೊದಲೇ ಬೆಳೆದಿರುವ ಸುಮಾರು 8000 ಮರಗಳಲ್ಲೂ ಸವನ್ನಾ ಕಾಡುಗಳ ಮರಗಳಲ್ಲಿ ಕಂಡುಬರುವಂತೆ ಕಾಡ್ಗಿಚ್ಚಿಗೆ ಹೊಂದಿಕೊಳ್ಳುವಂತಹ ಯಾವುದೇ ವಿಕಾಸ ಪ್ರಕ್ರಿಯೆಗಳೂ ಕಂಡುಬರುವುದಿಲ್ಲ (ಬೆಂಕಿ ಡೆಯಲು?? ದಪ್ಪನೆ ತೊಗಟೆಯನ್ನು ಹೊಂದುವುದು, ಕೆಳಹಂತದ ರೆಂಬೆ ಕೊಂಬೆಗಳು ಉದುರಿ ಹೋಗುವುದು, ಬೆಂಕಿಯ ಸಹಾಯದಿಂದ ಬೀಜ ಪ್ರಸಾರ).

ಇಂದು ಅಮೇಝಾನ್ ಕಾಡುಗಳಲ್ಲಿ ಸಂಭವಿಸುತ್ತಿರುವ ಸಾವಿರಾರು ಕಾಳ್ಗಿಚ್ಚುಗಳನ್ನು ನಾವು ಅಭ್ಯಸಿಸಬೇಕು. ಕಾಡಿಗೆ ಬಿದ್ದ ಬೆಂಕಿಯ ಪರಿಸ್ಥಿತಿ ಕೈಮೀರಿಹೋದಾಗ ಕಾಡ್ಗಿಚ್ಚು ಎಂದು ಕರೆಯಬೇಕಾಗುತ್ತದೆ. ಎಂದೂ ಕಾಡ್ಗಿಚ್ಚು ಬೀಳದೆ ಅದಕ್ಕೆ ತಕ್ಕುದಾದ ಬದಲಾವಣೆಗಳನ್ನು ಹೊಂದದೆ ಬೆಳೆದಿರುವ ಕಾಡಿಗೆ ಇಂದು ಕಾಳ್ಗಿಚ್ಚು ಬಿದ್ದಿದೆ ಎಂದರೆ ಏನರ್ಥ? ಹಾಗೂ ಬೆಂಕಿಯ ಹಾನಿಯನ್ನು ಹೇಗೆ ತಗ್ಗಿಸುವುದು?

ಅಭಾದಿತ ಉಷ್ಣವಲಯದ ಕಾಡುಗಳಲ್ಲಿ ಕಾಳ್ಗಿಚ್ಚು ಎಂದರೆ ಇಡೀ ಕಾಡಿಗೆ ಬೆಂಕಿಬಿದ್ದು ವೀಡಿಯೋಗಳಲ್ಲಿ ಕಂಡಂತೆ ಯಾ ಪುರಾಣದಲ್ಲಿ ಓದಿದ ಖಾಂಡವವನ ದಹನ, ಕಳೆದ ಬೇಸಿಗೆಯಲ್ಲಿ ಬಂಡೀಪುರ ಉರಿದು ಹೋದಂತೆ ಬೆಂಕಿಬೀಳುವುದಿಲ್ಲ. ಸುಮಾರು 700 ರಿಂದ 800 ಅಡಿಗಳಷ್ಟು ಕಾಡಿನ ಪ್ರದೇಶದಲ್ಲಿ ಒಂದು ಅಡಿಗೂ ಕಡಿಮೆ ಎತ್ತರದ ಜ್ವಾಲೆಯು ಕೇವಲ ಒಣ ಎಲೆಗಳು ಹಾಗೂ ಉದುರಿರುವ ಸಣ್ಣಪುಟ್ಟ ಕೊಂಬೆಗಳನ್ನು  ಸುಡುತ್ತವೆ. ಇಂತಹ ಕಾಡ್ಗಿಚ್ಚು ಆರಂಭವಾದಾಗ, ಅಲ್ಲಿರುವಂತಹ ಬಹಳಷ್ಟು ಜೀವಿಗಳು ಮತ್ತೊಂದು ಸ್ಥಳಕ್ಕೆ ಓಡಿಹೋಗುತ್ತವೆ, ಅಲ್ಲೇನಾದರೂ ಅಗ್ನಿಶಾಮಕದಳದವರಿದ್ದರೆ,  ಬಹಳ ಸುಲಭವಾಗಿ ಬೆಂಕಿ ದಾರಿಗಳನ್ನು ಮಾಡಿ ಬೆಂಕಿಯನ್ನು

ನಂದಿಸಿ ಹತೋಟಿಗೆ ತರುತ್ತಾರೆ ಅಥವಾ ರೈತ ಇರುವೆಗಳು ಸಾಗಿರುವ ಸಣ್ಣ ಹಾದಿಯೂ ಇಂತಹ ಬೆಂಕಿಯನ್ನು ತಡೆಗಟ್ಟುತ್ತವೆ. ಬೆಂಕಿಯ ತೀವ್ರತೆ ಅದರ ಅಗಾಧತೆಯನ್ನು ಕುರಿತು ತಿಳಿಸಬೇಕೆಂದೇನು ಇಲ್ಲ.



ಕಾಡ್ಗಿಚ್ಚನ್ನು ಪ್ರತಿರೋಧಿಸಿ ಉಳಿಯುವ ಕಲೆ ಈ ಮಳೆಕಾಡಿನ ಮರಗಳಲ್ಲಿ ವಿಕಾಸವಾಗದ ಕಾರಣ, ಇಲ್ಲಿಯ ಮರಗಳು ಸುಲಭವಾಗಿ ಬೆಂಕಿಗಾಹುತಿಯಾಗುತ್ತವೆ. ಒಂದು ಅತಿ ಸಣ್ಣ ಪ್ರಮಾಣದ ಕಾಡ್ಗಿಚ್ಚು ಕೂಡಾ ಸಣ್ಣಮರಗಳನ್ನು ಪೂರ್ಣ ಸುಟ್ಟು ಹಾಕುತ್ತವೆ. ದೊಡ್ಡಮರಗಳು ಬೆಂಕಿಗಾಹುತಿಯಾದ ಕೆಲವರ್ಷಗಳಲ್ಲಿ ಸತ್ತು ಹೋಗುತ್ತವೆ. ಇದರಿಂದ ಕೆಲವೇ ವರ್ಷಗಳಲ್ಲಿ ಮರಗಳ ಸಂಖ್ಯೆ ನಶಿಸುತ್ತದೆ. ಮರಗಳು ಸುಟ್ಟು ಹೋದಾಗ ಅದರಹಿಂದೆ ಮತ್ತೆಬೆಳೆಯುವ ಮರ ಎಂದೂ ಸುಟ್ಟುಹೋದ ಮರದ ಸ್ಥಳವನ್ನು ತುಂಬಲಾಗದು. ಒಮ್ಮೆ ಮರ ಸುಟ್ಟು ಹೋಗಿ ಆ ಸ್ಥಳದಲ್ಲಿ ಮತ್ತೊಂದು ಮರಬೆಳೆದು 30ವರ್ಷ ಕಳೆದರೂ, ಹೊಸದಾಗಿ ಬೆಳೆದಮರ ಸುಟ್ಟುಹೋದ ಮರದ ಸ್ಥಳವನ್ನು ತುಂಬಿಕೊಡಲಾಗದು. ಮರಗಳ ಮೇಲೆ ಇಂತಹ ಪರಿಣಾಮವಾದಾಗ, ಅದರಮೇಲೆ ಅವಲಂಬಿತವಾಗಿರುವ ಪ್ರಾಣಿಪಕ್ಷಿಗಳ ಮೇಲೂ ಪರಿಣಾಮ ಬೀರುತ್ತದೆ. ಸುಟ್ಟಕಾಡಿನ ಮೂಲವಾಸಿ ಪ್ರಾಣಿಪಕ್ಷಿಗಳು ವಲಸೆಹೋಗುತ್ತವೆ ಹಾಗೂ ಹುಳುಗಳನ್ನವಲಂಬಿಸಿರುವ ಪಕ್ಷಿಗಳು ಇಲ್ಲವಾಗುತ್ತವೆ; ಕಾಡಿನಮೇಲೆ ಅವಲಂಬಿತವಾಗಿರುವ ಸ್ಥಳೀಯರಿಗೆ ಅವರಿಗೆ ಬೇಕಾದ ಔಷಧಿ ಹಾಗೂ ಇತರ ಉತ್ಪನ್ನಗಳು ಸಿಗದೆ ಹೋಗುತ್ತವೆ.

ಕಾಡು ಮೊದಲಸಲ ಸುಟ್ಟುಹೋದಾಗ ಈ ಬದಲಾವಣೆಗಳು ಕಾಣುತ್ತವೆ, ಪದೇಪದೇ ಬೆಂಕಿಬೀಳುವ ಕಾಡುಗಳ ಕಥೆಯೇ ಬೇರೆ. ಅರ್ದಂಬರ್ಧಸುಟ್ಟ ಮರಗಳು ಮತ್ತೆ ಬೆಂಕಿ ಬಿದ್ದಾಗ ಸುಲಭವಾಗಿ ಬೆಂಕಿಗೆ ಆಹುತಿಯಾಗುತ್ತವೆ ಹಾಗೂ ಜ್ವಾಲೆ ಎತರೆತ್ತರಕ್ಕೆ ತನ್ನ ಕೆನ್ನಾಲಿಗೆಯನ್ನು ಚಾಚಿ ಉಳಿದಿರುವ ಇತರ ಮರಗಳೂ ಬೆಂಕಿಗಾಹುತಿಯಾಗುತ್ತವೆ. ಇಂತಹ ಪರಿಸ್ಥಿತಿ ಮುಂದುವರೆದರೆ ಅಮೇಝಾನ್ ಕಾಡುಗಳು ಸವನ್ನಾ ಬಯಲು ಕಾಡಿನಂತೆ ಕುರುಚಲುಪೊದೆ, ಅಲ್ಲೊಂದು ಇಲ್ಲೊಂದು ಮರ ಇರುವಂತೆ ಬದಲಾಗುತ್ತದೆ. ತನ್ನ ವಿಶೇಷತೆಗಳನ್ನು ಕಳೆದುಕೊಳ್ಳುತ್ತದೆ.

ಅತಿಮುಖ್ಯವಾದ ವಿಚಾರವೇನೆಂದರೆ ಅಮೇಝಾನಿನ ಕಾಡುಗಳಲ್ಲಿ ಬೆಂಕಿ ಬೀಳುವುದು ಅಪರೂಪದಲ್ಲಿ ಅಪರೂಪದ ವಿಷಯ, ಇತ್ತೀಚಿಗೆ ಅಲ್ಲಿ ಮತ್ತೆ ಮತ್ತೆ ಬೆಂಕಿ ಯಾಕೆ ಬೀಳುತ್ತಿದೆ? ಇಲ್ಲಿಯವರೆಗೂ ಅಮೇಝಾನ್ ಕಾಡುಗಳಲ್ಲಿ ಎಲ್ಲಿಗೆ ಬೆಂಕಿ ಬಿದ್ದು ಏನು ಸುಟ್ಟುಹೋಗುತ್ತಿದೆ ಎಂಬುದು ನಿಖರವಾಗಿ ತಿಳಿದಿಲ್ಲ. ಉಪಗ್ರಹಗಳು ಬೆಂಕಿ ಹಾಗೂ ಹೊಗೆಯನ್ನು ಪತ್ತೆಹಚ್ಚಿವೆ. ಬೆಂಕಿನಿಂತಾಗ ನಮಗೆ ನಿಖರವಾದ ಮಾಹಿತಿ ದೊರೆಯುತ್ತದೆ.

ಅಮೇಝಾನ್ ನ ಮೂಲನಿವಾಸಿಗಳು ಹಾಕುವ ಬೆಂಕಿಯಿಂದ ಈ ಅಕ್ರಮ ಬೆಂಕಿಗಳನ್ನು ಬೇರ್ಪಡಿಸಿ ನೋಡಬೇಕು. ಕೆಲವೊಮ್ಮೆ ಮಾನವನೆ ಕಾಡನ್ನು ಕಡಿದು ಬೆಂಕಿ ಹಾಕುತ್ತಾನೆ, ಹಾಗೂ ಅದೊಂದು ಹುಲ್ಲುಗಾವಲಾಗಿ ಪ್ರಾಣಿಗಳಿಗೆ ಮೇವು ಸಿಗುತ್ತದೆ. ಹಾಗೂ ವ್ಯವಸಾಯಕ್ಕೆ ಭೂಮಿ ದೊರೆಯುತ್ತದೆ. ಈಗ ಒಣ ಹವಾಮಾನವಿದ್ದರೂ ಅಮೇಝಾನ್ ಕಾಡುಗಳ ಬೆಂಕಿ ನಮಗೆಲ್ಲ ಒಂದು ಚೇತಾವ?ನೆಯಾಗಿದೆ. ಇದರಲ್ಲಿ ಬಹಳಷ್ಟು ಬೆಂಕಿ ಅಪಘಾತಗಳು ಕಾನೂನು ಬಾಹಿರವಾಗಿವೆ ಹಾಗು ರಾಜಕೀಯ ಪ್ರೇರಿತವಾಗಿವೆ. ಕಾಡಿಗೆ ಬೆಂಕಿ ಬಿದ್ದಾಗ ಬೆಂಕಿದಾರಿಯಂತಹ ಸರಳ ಉಪಾಯಗಳಿಂದ ಬೆಂಕಿಯನ್ನು ಹತೋಟಿಗೆ ತರಬೇಕು. ತನ್ನ ಅಮೇಝನ್ ಕಾಡುಗಳನ್ನು ಉಳಿಸಿ ಬೆಳೆಸಬೇಕಾದ ಬ್ರೆಝಿಲ್ ಸರ್ಕಾರ ಕಾಡುಗಳಿಗೆ ನೀಡುವ ಅನುದಾನದಲ್ಲಿ ಶೇ95 ರಷ್ಟು ಕಡಿತ ಮಾಡಿದೆ. ಇದೊಂದು ದುಃಖಕರ ವಿವೇಚನಾರಹಿತ ದೂರದೃಷ್ಟಿ ಇರದ ನಿರ್ಧಾರ.

ಕಾಡಿಗೆ ಬೆಂಕಿ ಬೀಳುವುದನ್ನು ಕಡಿಮೆ ಮಾಡಲು ಕಾಡಂಚಿನ ನಾಶವನ್ನು ತಡೆಗಟ್ಟಬೇಕು, ಇಲ್ಲದಿದ್ದರೆ ಕಾಡಂಚಿನ ಜಮೀನುಗಳು ಮಳೆಗಳನ್ನು ವ್ಯತ್ಯಸಿಸಿ ಹವಾಮಾನದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ ಹಾಗೂ ಮಳೆ ಕಡಿಮೆಯಾಗುತ್ತದೆ. ಬೆಂಕಿಬೀಳದ ಕಾಡಿನೊಳಗೆ ಯಾವಾಗಲೂ ತೇವಾಂಶವಿದ್ದು ಎಲೆಗಳು ಬೇಸಿಗೆಯಲ್ಲೂ ಹಸಿಯಾಗಿರುತ್ತವೆ. ಆದರೆ ಬೆಂಕಿಬಿದ್ದ ಕಾಡಿನೊಳಗೆ ಎಲೆಗಳು ಒಣಗಿರುತ್ತವೆ ಹಾಗೂ ಕಾಲ್ತುಳಿತಕ್ಕೆ ಸದ್ದುಮಾಡುತ್ತವೆ ಹಾಗೂ ಸುಲಭವಾಗಿ ಬೆಂಕಿಗೆ ತುತ್ತಾಗುತ್ತವೆ.

ಹೆಚ್ಚುತ್ತಿರುವ ಜಾಗತಿಕ ತಾಪಮಾನ, ಹೆಚ್ಚುತ್ತಿರುವ ಕಾಡುನಾಶ, ಮಾನವನ ಕಾಡಿನ ಉತ್ಪನ್ನಗಳಮೇಲೆ ಹೆಚ್ಚಾದ ಮೋಹ, ಕಾಡನ್ನು ಕಡಿದು ಸುಡುವುದರಿಂದ ಸಿಗುವ ಮೇವು, ವ್ಯವಸಾಯದ ಜಮೀನಿನ ದುರಾಸೆಗೆ ಬಿದ್ದಿರುವ  ಮಾನವ ತನ್ನುಳಿವಿಗೆ ಬೇಕಾದ ಕಾಡಿಗೆ ತಾನೇ ಕೊಳ್ಳಿ ಇಡುತ್ತಿದ್ದಾನೆ. ಕಾಡುಗಳ ನಾಶದಿಂದ ಉಳಿವಿನಿಂದ ಪ್ರಕೃತಿಗೆ ಏನೂ ಆಗದು, ನಮ್ಮ ಬದುಕೇ ದುಸ್ತರವಾಗುವುದು.








- ಡಾ.ದೀಪಕ್ ಬಿ.

ಮೈಸೂರು.



ವಿ. ವಿ. ಅಂಕಣ

# ಬರಲಿದೆ ಹೊಸ ಶಿಲೀಂಧ್ರ ರೋಗ!

ಹವಾಮಾನ ವೈಪರೀತ್ಯ ಎಂದರೇನು? ಎಂಬ ಪ್ರಶ್ನೆಗೆ ಉತ್ತರ, ಅತಿಯಾದ ಹಸಿರುಮನೆ ಅನಿಲಗಳ ಬಿಡುಗಡೆಯಿಂದಾಗಿ ಭೂಮಿಯ ಮೇಲ್ಮೈ ಉಷ್ಣಾಂಶ ಜಾಸ್ತಿಯಾಗಿ, ಧ್ರುವಗಳ ಮಂಜುಗಡ್ಡೆ ಕರಗಿ, ಸಮುದ್ರದ ನೀರಿನ ಮಟ್ಟ ಹೆಚ್ಚುತ್ತಿದೆ ಎಂಬುದು ಈಗ ಎಲ್ಲರೂ ತಿಳಿದಿರುವ ಸಾಮಾನ್ಯ ಜ್ಞಾನ ಆಗಿದೆ. ಇದರ ಪರಿಣಾಮಗಳೇನೆಂದು ಕೇಳಿದರೆ ಬಹುಶಃ ಸಮುದ್ರ ಮಟ್ಟ ಏರುವಿಕೆಯಿಂದ ಎಷ್ಟೋ ಭೂ ಪ್ರದೇಶಗಳು ಮುಳುಗಡೆಯಾಗಬಹುದು ಹಾಗೂ ಸಮುದ್ರದ ಉಷ್ಣಾಂಶವೂ ಏರುವುದರಿಂದ ಅಲ್ಲಿನ ಜೀವಿಗಳ ಜೀವಗಳಿಗೆ ಕುತ್ತಾಗಬಹುದು, ಎಂದು ಇನ್ನೂ ಸ್ವಲ್ಪ ಹೆಚ್ಚು ಓದಿದವರಿಗೆ ತಿಳಿದ ವಿಷಯವಾಗಬಹುದು. ಈ ಮುಂಚೆಯೇ ವಿ ವಿ ಅಂಕಣದಲ್ಲಿ ಹೇಳಿರುವ ಹಾಗೆ ಹವಾಮಾನ ವೈಪರೀತ್ಯದಿಂದ ಅರಿಯದ ಹಾಗೂ ಎಂದೂ ಊಹಿಸದ ಪರಿಣಾಮಗಳು ಒಂದೊಂದೇ ತಲೆಯೆತ್ತುತ್ತಿವೆ. ಹಾಗೂ ಮುಖ್ಯವಾಗಿ ಇವಾವುದೂ ಭೂಮಿಯ ಮೇಲೆ ವಾಸಿಸುವ ಯಾವ ಜೀವಿಗಳಿಗೂ ಒಳಿತಲ್ಲ. ಅದಕ್ಕೆ ಬಲವಾದ ಇನ್ನೊಂದು ನಿದರ್ಶನವೇ ಈ ಮಾಸದ ವಿ ವಿ ಅಂಕಣದ ವಿಷಯ.

ಮಳೆಗಾಲದಲ್ಲಿ ಮಾತ್ರ ನೋಡಲು ಸಿಗುವ ಶಿಲೀಂಧ್ರಗಳು ಕೇವಲ ನಮ್ಮ ಆಹಾರವಾಗಿ ನೋಡುತ್ತಿದ್ದ ನನಗೆ ಈ ಮಳೆಗಾಲ ತೋರಿದ ಸುಂದರ ವಿವಿಧ ಪ್ರಭೇದಗಳನ್ನು ಕಂಡು ಆಶ್ಚರ್ಯದ ಜೊತೆಗೆ ಸಂತೋಷವಾಯಿತು. ಅವುಗಳಲ್ಲಿರುವ ಬಣ್ಣಗಳು, ಅವುಗಳ ಗಾತ್ರಗಳು, ಅವುಗಳ ಆಕಾರ-ಅಲಂಕಾರಗಳು 'ಅಬ್ಬಾ!' ಎನ್ನುವಂತೆ ಮಾಡಿಬಿಟ್ಟವು. ನಮ್ಮ ಸುತ್ತಮುತ್ತಲೇ ನೋಡಿ ಸೆರೆ ಹಿಡಿದಿರುವ ಶಿಲೀಂಧ್ರ(ಅಣಬೆ)ಗಳ ಕೆಲ ಚಿತ್ರಗಳು ನಿಮಗೋಸ್ಕರ ಈ ಕೆಳಗಿವೆ.







ಇಷ್ಟು ನಯನ ಮನೋಹರವಾಗಿರುವ ಶಿಲೀಂಧ್ರಗಳಲ್ಲೇ ಕೆಲವು ಏನಾದರೂ ನಮ್ಮ ದೇಹಕ್ಕೆ ಕಾಲಿರಿಸಿದರೆ ಅದರಿಂದಾಗುವ ತೊಂದರೆಗಳು ಬಲ್ಲವನೇ ಬಲ್ಲ. ಶಿಲೀಂಧ್ರ (ಫಂಗಸ್)ಗಳು ಹೆಚ್ಚಾಗಿ ಮನುಷ್ಯರನ್ನು ಬಾಧಿಸುವುದಿಲ್ಲ. ಯಾವುದೋ ಒಂದೆರೆಡು ಮಾತ್ರ, ಅದೂ ಕೂಡ ಪ್ರಾಣಕಂಟಕವೇನಲ್ಲ. ಸಾವಿರಾರು ಪ್ರಭೇದಗಳಲ್ಲಿರುವ ಶಿಲೀಂಧ್ರಗಳು ನಮ್ಮ ಮೇಲೆ ಎರಗದಿರಲು ಕಾರಣ, ಶಿಲೀಂಧ್ರಗಳು ಬೆಳೆಯಲು ಉಷ್ಣಾಂಶ ಕಡಿಮೆ ಇರಬೇಕು ಹಾಗೂ ತೇವಾಂಶವಿರಬೇಕು. ನಾವುಗಳು ಬಿಸಿ ರಕ್ತ ಜೀವಿಗಳು, ನಮ್ಮ ದೇಹದ ಉಷ್ಣಾಂಶ ಸರಾಸರಿ 37 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಜೊತೆಗೆ ರೋಗನಿರೋಧಕ ಶಕ್ತಿಯೂ ಗಟ್ಟಿಯಾಗೇ ಇರುತ್ತದೆ. ಇದರಿಂದಾಗಿಯೇ ಎಷ್ಟೋ ಸಸ್ಯಗಳಿಗೆ, ಕಪ್ಪೆಗಳಿಗೆ, ಹಾವಿನಂತಹ ಸರೀಸೃಪಗಳಿಗೆ ಮಾರಕವಾಗಿರುವ ಫಂಗಸ್ ನಮಗೆ ಎಂದರೆ ಸಸ್ತನಿಗಳಿಗೆ ಮಾತ್ರ ಸಿಡಿಯದ ಬಾಂಬ್ ಆಗಿ ಇತ್ತು. ಬಹುಶಃ ಅದು ಟೈಮ್ ಬಾಂಬ್ ಆಗಿತ್ತೇನೋ, ಈಗ ಅದು ಸಿಡಿದು ನಮ್ಮ ಮೇಲೂ ದಾಳಿ ಮಾಡಲು ಶುರುಮಾಡಿವೆ.

ಬಿಸಿ ರಕ್ತ ಪ್ರಾಣಿಗಳಾದ ಅಂದರೆ ದೇಹದ ಉಷ್ಣಾಂಶ ಹೆಚ್ಚಿರುವ ಹಾಗೂ ಜೊತೆಗೆ ರೋಗನಿರೋಧಕ ಶಕ್ತಿ ಹೆಚ್ಚಿರುವ ನಮ್ಮ ಮೇಲೂ ತಮ್ಮ ಪ್ರಭಾವ ತೋರಲು ಶಿಲೀಂಧ್ರಗಳಿಗೆ ಹೇಗೆ ಸಾಧ್ಯ? ಎಂಬ ಪ್ರಶ್ನೆ ನಿಮ್ಮ ಮಸ್ತಕದಲ್ಲಿ ಮೂಡಿದ್ದರೆ ಉತ್ತಮ, ಮೂಡದಿದ್ದರೆ ಮೂಡಿಸಿಕೊಳ್ಳಿ ಇಲ್ಲವಾದರೆ ಮುಂದುವರೆಯಲು ಕುತೂಹಲದ ಕೊರತೆಯಾದೀತು.

2012 ರಿಂದ 2015ರಲ್ಲಿ ಕ್ಯಾಂಡಿಡಾ ಆರಿಸ್(Candida auris) ಎಂಬ ರೋಗಕಾರಕ ಶಿಲೀಂಧ್ರವು ಆಫ್ರಿಕಾ, ಏಷಿಯಾ ಮತ್ತು ದಕ್ಷಿಣ ಅಮೇರಿಕಾಗಳಲ್ಲಿ ಒಂದೇ ಬಾರಿ ಹುಟ್ಟಿಕೊಂಡವು. ಈ ಮೂರೂ ಖಂಡಗಳಲ್ಲಿ ಸಿಗುವ ಕ್ಯಾಂಡಿಡಾ ಶಿಲೀಂಧ್ರದ ಸೋಂಕು ಒಂದೇ ಸಮಯದಲ್ಲಿ ಬಂದದ್ದರಿಂದ ಇವುಗಳು ಸ್ವತಂತ್ರವಾಗಿ ಅಲ್ಲಿಯೇ ಹುಟ್ಟಿರಬೇಕು ಹಾಗೂ ಇವುಗಳ ಹೆಸರು ಒಂದೇ ಇದ್ದರೂ ಇವುಗಳ ಉಪ ಪ್ರಭೇದಗಳು ಬೇರೆ ಇರುವುದರಿಂದ ಇವುಗಳು ಅಂತರಾಷ್ಟ್ರೀಯ ಪ್ರಯಾಣಿಕರಿಂದ ಹರಡಿರಲು ಸಾಧ್ಯವೇ ಇಲ್ಲ.



*ಕ್ಯಾಂಡಿಡಾ ಆರಿಸ್ ಶಿಲೀಂಧ್ರ*

ಹಾಗಾದರೆ ಈ ಸೋಂಕು ಹೇಗೆ ಹುಟ್ಟಿಕೊಂಡಿರಬಹುದು? ಇದಕ್ಕೆ ಕಾರಣವೇನಿರಬಹುದು?

ಕಾರಣ ನೀವು(ನಾವು)!

ವಾತಾವರಣ ಬದಲಾವಣೆಯ ವೈಪರೀತ್ಯದ ಕಾರಣ ಭೂಮಿಯ ಉಷ್ಣಾಂಶ ಹೆಚ್ಚುತ್ತಿದೆ ಅಲ್ಲವೇ, ಅದರ ಪರಿಣಾಮ ಕಡಿಮೆ ಉಷ್ಣಾಂಶದಲ್ಲಿ ಬೆಳೆಯಬೇಕಿದ್ದ ಶಿಲೀಂಧ್ರಗಳು ಈಗ ಕೊಂಚ ಬಿಸಿಯಾದ ವಾತಾವರಣದಲ್ಲಿಯೂ ಬೆಳೆಯಲು ಒಗ್ಗಿಕೊಂಡಿವೆ. ಹಾಗಾಗಿ ಅವು ಬಿಸಿ ರಕ್ತ ಪ್ರಾಣಿಗಳಾದ ಸಸ್ತನಿಗಳಿಗೆ ಹಾಗೂ ನಮ್ಮ ದೇಹದ ಸರಾಸರಿ ಉಷ್ಣಾಂಶವಾದ 37 ಡಿಗ್ರಿಯಲ್ಲಿಯೂ ಸಹ ವಿಭಜಿಸಲು ಸಾಧ್ಯವಾಗಿದೆ. ಇದರಿಂದಾಗಿ ಉಷ್ಣ ದೇಹವುಳ್ಳ ಹಾಗೂ ಹೆಚ್ಚು ರೋಗನಿರೋಧಕ ಶಕ್ತಿ ಇರುವ ನಾವೂ ಸಹ ಶಿಲೀಂಧ್ರ ರೋಗಕ್ಕೆ ತುತ್ತಾಗುವ ಎಲ್ಲಾ ಸಾಧ್ಯತೆಗಳಿವೆ. ಈಗ ಹೇಳಿ ಈ ವಾತಾವರಣದ ಬದಲಾವಣೆಗೆ ಕಾರಣರಾರು, ಹೊಸದಾಗಿ ಹುಟ್ಟುತ್ತಿರುವ ಈ ಮಾರಣಾಂತಿಕ ಸೋಂಕುಗಳಿಗೆ ಹೊಣೆ ಯಾರು?

ಅಮೇರಿಕಾ ಒಂದರಲ್ಲೇ 2016ರ ಸಾಲಿನ ಮಧ್ಯದಿಂದ ಇಲ್ಲಿಯವರೆಗೆ ಸುಮಾರು 700 ಸೋಂಕು ಪೀಡಿತರು 12 ರಾಜ್ಯಗಳಿಂದ ದಾಖಲಾಗಿದ್ದಾರೆ ಹಾಗೂ ಪ್ರಪಂಚದ ಇನ್ನೂ 30 ದೇಶಗಳು ಇದೇ ಕ್ಯಾಂಡಿಡಾ ಶಿಲೀಂಧ್ರದಿಂದ

ಹರಡಿರುವ ಸೋಂಕನ್ನು ದಾಖಲಿಸಿವೆ. ಈ ರೋಗವು ಶೇಖಡಾ 30-60% ಮಾರಣಾಂತಿಕವಾಗಿದ್ದು, ಈ ಸೋಂಕು ಹೆಚ್ಚಾಗಿ ಮಾನವನ ಬಹು ಮುಖ್ಯ ಅಂಗಗಳಾದ ಮೆದುಳು ಮತ್ತು ಹೃದಯಗಳಿಗೆ ತಗುಲಿ ಬಾಧಿಸುತ್ತವೆ. ಜೊತೆಗೆ ನಮ್ಮ ರಕ್ತದಲ್ಲಿಯೂ ಸೋಂಕು ಹರಡಬಹುದು. ನಮ್ಮ ದುರಾದೃಷ್ಟವೆಂದರೆ ಈಗ ತಲೆಯೆತ್ತುತ್ತಿರುವ ಈ ಶಿಲೀಂಧ್ರ ಸೋಂಕು ನಮ್ಮ ಬಳಿ ಈಗಾಗಲೇ ಇರುವ ಹಲವಾರು ಪ್ರತಿಶಿಲೀಂಧ್ರ (anti fungal) ಔಷಧಿಗಳಿಗೆ ಯಾವುದೇ ರೀತಿಯಲ್ಲೂ ಬಗ್ಗುತ್ತಿಲ್ಲವಂತೆ.

ಅರೇ ಮುಂದೇನು ಗತಿ?! ಎನಿಸುತ್ತಿದೆಯೇ? ಅಥವಾ ಏನೂ ಪರವಾಗಿಲ್ಲ ಬಿಡಿ ಈ ಹೊಸ ರೋಗಕ್ಕೆ ಇನ್ನೊಂದು ಔಷಧ ಹುಡುಕಿದರಾಯಿತು, ಎನಿಸುತ್ತಿದೆಯೆ? ಬೊಜ್ಜು ಬೆಳೆದರೆ ವ್ಯಾಯಾಮದಿಂದ ಕರಗಿಸಲು ಸಮಯವಿಲ್ಲದೆ, ಸೋಮಾರಿಗಳ ಹಾಗೆ ಸೋನಾ ಬೆಲ್ಟ್ ಧರಿಸುವ ನಮಗೆ ಇಂತಹ ಆಲೋಚನೆಯೇ ಬರುವುದು. ಈ ಮೇಲೆ ಹೇಳಿರುವ ವಿಷಯವೆಲ್ಲಾ ಕೇವಲ ಒಂದು ಶಿಲೀಂಧ್ರದ ಅವಾಂತರ, ನಮ್ಮ ಸುತ್ತ ಮುತ್ತಾ ಬೇರೆ ಬೇರೆ ಪ್ರಭೇದದ ಲಕ್ಷಾಂತರ ಶಿಲೀಂಧ್ರಗಳಿವೆ. ಅವುಗಳೇನಾದರೂ ನಮ್ಮ ದೇಹದ ಉಷ್ಣಾಂಶದಲ್ಲಿ ವಿಭಜಿಸಲು ಒಗ್ಗಿಕೊಂಡರೆ ನಮ್ಮ ಹಣೆಬರಹವೇನಾಗಬಹುದು?

ನಿಮ್ಮ ಊಹೆಯ ಹಣೆಬರಹಗಳ ಬರೆದು ಈ ಕೆಳಗಿನ ಇ-ವಿಳಾಸಕ್ಕೆ ಕಳುಹಿಸಿ.

@kaanana.mag@gmail.com (Sub: Feedback-VVAnkana Sep-19)

ಮೂಲ ಲೇಖನ: ScienceNews for Students





- ಜೈ ಕುಮಾರ್ .ಆರ್
ಡಬ್ಲ್ಯೂ.ಸಿ.ಜಿ., ಬೆಂಗಳೂರು.

# ಪ್ರಕೃತಿಯು ಕೊಡುಗೆ

ಭೂಮಿಯ ಮೇಲೆ ಹರಡುತ್ತಿದೆ ಬೆಳ್ಳಕ್ಕಿಗಳ ಬಾನು

ಸೂರ್ಯನು ಮೇಲೇರಿ ಬಂದ ನಿದ್ರೆಯಿಂದ ತಾನು

ದುಂಬಿಗಳು ಹುಡುಕುತ್ತಿವೆ ಹೂ ಸವಿಯಲು ಜೇನು

ಕವಿ ಕಾಳಿದಾಸ ನೋಡಿದರೆ ಇದನ್ನು ಏನಂದಾನು?

ಕಾಡಿನಲ್ಲಿ ಎಲೆ ಸರಿಸಿ ದಾರಿಯ ಬಿಟ್ಟಿದೆ

ರೆಂಬೆ ಕೊಂಬೆಗಳ ಮೇಲೆ ಜೇನನು ಕಟ್ಟಿದೆ

ದೈತ್ಯ ಮರಗಳು ಬೆಳೆದಿವೆ ಆಕಾಶ ಮಟ್ಟಿಗೆ

ಇದು ಸ್ವಾತಂತ್ರ್ಯವಾದ ವನ್ಯ ಮೃಗಗಳ ಕೊಟ್ಟಿಗೆ.

ಮುಂಜಾನೆ ಮಂಜಿನಲ್ಲಿ ಮಂಜು ಹೂಮಳೆ ಸುರಿಸುತ್ತಿದೆ

ಹಕ್ಕಿಗಳ ಹಾಡು ಇಲ್ಲಿ ಶುಭವ ಕೋರುತ್ತಿದೆ

ಮುಗ್ಧ ಜಿಂಕೆಗಳು ಹಸಿರನ್ನ ಮೇಯುತ್ತಿವೆ

ಹುಲಿಗಳು ತಮ್ಮ ಬೇಟೆಗಾಗಿ ಕಾಯುತ್ತಿವೆ.

ಪ್ರಕೃತಿಯು ನಮಗೆ ಇದು ಕೊಟ್ಟಿರುವ ಕೊಡುಗೆ

ಭೂಮಿತಾಯಿ ತಾನು ಉಟ್ಟಿರುವ ಉಡುಗೆ

ಹೇ ಮಾನವ ನೀನಡೆದರೆ ದುರಾಸೆಯ ಕಡೆಗೆ

ನಿನಗೆ ಸಿಕ್ಕುವುದು ನಿರಸೆಯೇ ಕಡೆಗೆ

- ಮಧುಸೂದನ ಹೆಚ್. ಸಿ.

ಸಹಾಯಕ ಪ್ರಾಧ್ಯಾಪಕ, DSATM

ಬೆಂಗಳೂರು

© ಪೂಜ

# ಪ್ರಕೃತಿ ಬಿಂಬ




**ಸೂರ್ಯ ತಂಪಾಗಿಸುವ ಹೊತ್ತು** **© ವಿನೋದ್ ಕುಮಾರ್ ವಿ. ಕೆ.**

ಸೂರ್ಯ ತಂಪಾಗಿಸುವ ಹೊತ್ತು... ಬಾನು ಕೆಂಪೇರಿತ್ತು... ಚಲಿಸುವ ಮೋಡಗಳನ್ನು ಹಿಂದಿಕ್ಕಿ ಕತ್ತಲಾಗುವ ಮುನ್ನ ಗೂಡು ಸೇರುವ ಹಂಬಲದೊಂದಿಗೆ ಹಾರುತ್ತಿರುವ ಹಕ್ಕಿಗಳು...!! ಈ ದೃಶ್ಯ ಕಂಡು ಬರುವುದು ಸೂರ್ಯಾಸ್ತದ ಸಮಯದಲ್ಲಿ. ಗಗನ ತುಂಬೆಲ್ಲಾ ಆವರಿಸಿದೆ ಬಂಗಾರ ಬಣ್ಣದ ಛಾಯೆ, ಮೋಡಗಳ ಅಂಚಿಗೆ ಸುವರ್ಣ ರೇಖೆ ಎಂದು ಹೆಚ್.ಎ. ಪಾಟಿಲ್ ರವರು ಸೂರ್ಯಾಸ್ತವನ್ನು ವರ್ಣಿಸಿದ್ದಾರೆ. ಸೂರ್ಯನ ಕಿರಣಗಳು ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ ಎನ್ನುವುದಕ್ಕೆ ಮೇಲಿನ ಚಿತ್ರವೇ ನಿದರ್ಶನ.



**ನದಿದಂಡೆ** **© ವಿನೋದ್ ಕುಮಾರ್ ವಿ. ಕೆ.**

ಪ್ರಕೃತಿಯ ಸೌಂದರ್ಯವನ್ನು ಸವಿಯಬಹುದೇ ಹೊರತು ವರ್ಣಿಸಲು ಸಾಧ್ಯವಿಲ್ಲ. ನದಿಯ ದಂಡೆಯಲ್ಲಿ ಹಚ್ಚ ಹಸಿರಾಗಿ ಬೆಳೆದಿರುವ ಹುಲ್ಲನ್ನು ತಿನ್ನುತ್ತಿರುವ ಹಸುಗಳನ್ನು ಹಾಗು ಮೀನನ್ನು ಬೇಟೆಯಾಡಲು ಕಾದು ಕುಳಿತುಕೊಂಡಿರುವ ಕೊಕ್ಕರೆಗಳನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು. ಈ ಸುಂದರವಾದ ದೃಶ್ಯ ನೋಡಿದರೆ, ಈ ರೀತಿಯ ದೃಶ್ಯದ ಸೊಬಗನ್ನು ಸವಿಯಲೆಂದೆ ಶ್ರೀ ಕೃಷ್ಣ ಪರಮಾತ್ಮ ಗೊಲ್ಲನಾಗಿ ಜನಿಸಿದ್ದು ಅನಿಸುತ್ತದೆ.



ಪರ್ವತ ಶ್ರೇಣಿ © ವಿನೋದ್ ಕುಮಾರ್ ವಿ. ಕೆ.

ನೀಲಗಿರಿ ಪರ್ವತ ಶ್ರೇಣಿಯ ನೀಲ ಬೆಟ್ಟಗಳಡಿಯಲ್ಲಿ ನೀಲಿ-ಹಸಿರು ರಾಶಿಯ ನಡುವೆ ಘಮ್ಮನೆಂದು ಅರಳಿ ನಿಂತ ಭೂಲೋಕದ ಸ್ವರ್ಗವಿದು. ನೈಸರ್ಗಿಕ ಚೆಲುವಿಗೆ ಮನುಷ್ಯ ಕುಸುರಿ ಇಟ್ಟ ಧರೆಗಿಳಿದ ನಾಕ. ದಟ್ಟ ಕಾಡು, ಎತ್ತರೆತ್ತರದ ನೀಲಗಿರಿ ಮರಗಳ ತನ್ಮಯತೆ, ವಿಸ್ತಾರವಾದ ಚಹಾ ತೋಟಗಳ ಸೊಬಗು, ಜಗತ್ತಿನಲ್ಲೆಲ್ಲೂ ಕಾಣದ ಅಪರೂಪದ ಹೂಗಳ ಘಮ, ಇದುವರೆಗೂ ತಿಂದೇ ಇರದ ಹಣ್ಣುಗಳ ಮಧುರ ಸ್ವಾದ. ದಿನವಿಡೀ ಮೇಘಗಳ ಮಾಲೆ, ಒಮ್ಮೆ ದೃಶ್ಯವಾಗಿ ಮತ್ತೊಮ್ಮೆ ಅದೃಶ್ಯವಾಗುವ ಲೀಲೆ. ಅಂದು ಹಾಗೆ ಇದು ಊಟಿಯ ಒಂದು ದೃಶ್ಯ.



**ಕಾಡ್ಗಿಚ್ಚು** © **ವಿನೋದ್ ಕುಮಾರ್ ವಿ. ಕೆ.**

ಕಾಡ್ಗಿಚ್ಚು ಅರಣ್ಯದಲ್ಲಿ ಬೀಸುವ ಗಾಳಿಯಿಂದಾಗಿ ಅಲ್ಲಿರಬಹುದಾದ ಒಣಗಿದ ಮರದ ಕಾಂಡಗಳು ಅಥವಾ ಪೊದೆಗಳು ಒಂದಕ್ಕೊಂದು ಘರ್ಷಣೆಗೊಳಗಾಗಿ ಹತ್ತಿಕೊಳ್ಳುತ್ತದೆ ಎಂದು ನಾವು ಪುಸ್ತಕಗಳಲ್ಲಿ ಓದಿದ್ದೇವೆ, ಆದರೆ ನಿಜ ರೂಪವೇ ಬೇರೆ. ಕಾಡ್ಗಿಚ್ಚು 95 ಪ್ರತಿಶತ ಮಾನವ ನಿರ್ಮಿತ ಕೃತ್ಯ. ಸಣ್ಣ ಕಿಡಿಯಾಗಿ ಜನ್ಮ ತಾಳುವ ಇದು ಗಾಳಿ ಬೀಸುವ ದಿಕ್ಕಿನೆಲ್ಲೆಡೆ ತನ್ನ ಅಗ್ನಿಯ ಕೆನ್ನಾಲಿಗೆಯನ್ನು ಚಾಚುವ ಈ ಕಾಡ್ಗಿಚ್ಚಿಗೆ ಯಾವುದೇ ನಿಶ್ಚಿತ ಗುರಿಯಿರುವುದಿಲ್ಲ. ತಾನು ಹೋದಲ್ಲೆಲ್ಲಾ ಇರುವ ಪ್ರಾಣಿ ಪಕ್ಷಿಗಳ ಆಹುತಿ ತೆಗೆದುಕೊಳ್ಳುತ್ತದೆ. ಅದರಲ್ಲಿ ಸಿಲುಕಿದ ಜೀವಿಗಳ ಪರಿಸ್ಥಿತಿ ಊಹಿಸಲಾಗದು. ಆದರೆ ಅರಣ್ಯದ ಜೀವ ಸಂಕುಲವನ್ನು ಸಮತೋಲನದಲ್ಲಿಡಲು ನಿಸರ್ಗವೇ ಕಂಡುಕೊಂಡ ಮಾರ್ಗವಿದು ಎಂದು ಅಭಿಪ್ರಾಯಪಡುವವರೂ ಇದ್ದಾರೆ.

**ಛಾಯಾಚಿತ್ರಗಳು : ವಿನೋದ್ ಕುಮಾರ್ ವಿ. ಕೆ.**
**ಲೇಖನ : ವಿವೇಕ್ ಜಿ. ಎಸ್.**

# ನೀವೂ ಕಾನನಕ್ಕೆ ಬರೆಯಬಹುದು


© ಮಹದೇವ ಕೆ. ಸಿ.

ಮರಗಳಿಲ್ಲದ ಮರಳುಗಾಡಿನಂತೆ, ಕೂದಲಿಲ್ಲದ ಬೋಳು ತಲೆ, ಉದ್ದನೆಯ ಪುಕ್ಕರಹಿತ ಕತ್ತು, ಚಿಕ್ಕ ಬಾಲ, ಕತ್ತಿನ ಸುತ್ತ ಬಿಳಿಯ ಗರಿಗಳು, ಕಂದು-ಕಪ್ಪು ಮಿಶ್ರಿತ ಬಣ್ಣದ ಶರೀರ, ಮಾಂಸವನ್ನು ಕತ್ತರಿಸುವಷ್ಟು ಬಲಿಷ್ಟವಾದ ಕೊಕ್ಕು. ವಿಶಾಲವಾದ ರೆಕ್ಕೆ, ಎಂತವರ ಎದೆಯಲ್ಲು ಭಯ ಹುಟ್ಟಿಸುವ ಪಕ್ಷಿ. ಯಾವಾಗಲು ಸ್ವಚ್ಛಂದ ಆಕಾಶದಲ್ಲಿ ಹಾರಾಡುತ್ತ ತನ್ನ ಕಣ್ಣಿನ ತೀಕ್ಷ್ಣವಾದ ನೋಟದಿಂದಲೇ ಭೂಮಿಯ ಮೇಲ್ಮೈ ಯಲ್ಲಿರುವ ಆಹಾರವನ್ನು ಹುಡುಕುವ ಪಕ್ಷಿ. ಹಾಗಾದರೆ, ಈ ಪಕ್ಷಿಯಾವುದು? ಸತ್ತ ಪ್ರಾಣಿ ಕಣ್ಣಿಗೆ ಬಿದ್ದ ತಕ್ಷಣ, ಆಕಾಶದಿಂದ ಭೂಮಿಗೆ ಇಳಿದು, ಗುಂಪಿನಲ್ಲಿ ಬಂದು ತನ್ನ ಬಲಿಷ್ಟವಾದ ಕೊಕ್ಕಿನಿಂದ ಸತ್ತ ಪ್ರಾಣಿಯನ್ನು ಇರಿದು ತಿನ್ನುವ ಪಕ್ಷಿಯೇ ರಣಹದ್ದು.

ಕೊಳೆತ ಪ್ರಾಣಿಗಳ ದೇಹದಿಂದ ಹಬ್ಬುವ ಕಾಯಿಲೆಗಳನ್ನು ಈ ರಣಹದ್ದುಗಳು ತಡೆಗಟ್ಟಿ ಮನುಷ್ಯನಿಗೆ ಅನುಕೂಲಕರವಾಗಿವೆ. ಗರುಡ, ಚೊಟ್ಟಿ ಗರುಡ, ಜೌಗು ಸೆಳೆವ, ಡೇಗೆ, ಮೀನು ಗಿಡುಗ, ರಾಮದಾಸ ಹಕ್ಕಿ, ವೈನತೇಯ, ಹದ್ದು, ಹಾವು ಗಿಡುಗ ಹಾಗೂ ಬಿಳಿ ರಣಹದ್ದು ಮತ್ತು ಗೂಬೆಗಳಾದ ಹಿಂಸ್ರ ಪಕ್ಷಿಗಳು ಈ ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುತ್ತವೆ.ಆದರೆ ಈಗ ರಣಹದ್ದು ಸಂಖ್ಯೆ ಕ್ಷೀಣಿಸುತ್ತಿರುವುದಕ್ಕೆ ಒಂದು ಪ್ರಮುಖ ಅಂಶವೆಂದರೆ ಡಿಕ್ಲೋಫೆನಾಕ್ ನಂತಹ ಔಷಧಿಗಳ ವ್ಯಾಪಕ ಬಳಕೆ, ಇದನ್ನು ಸಾಮಾನ್ಯವಾಗಿ ಜಾನುವಾರುಗಳ ಉರಿಯೂತದ ಔಷಧವಾಗಿ ಬಳಸಲಾಗುತ್ತಿದ್ದು. ಸತ್ತ ಜಾನುವಾರುಗಳನ್ನು ತಿನ್ನುವ ರಣಹದ್ದುಗಳಿಗೆ ಡಿಕ್ಲೋಫೆನಾಕ್ ಎಂಬ ಔಷಧಿಯಿಂದ ಅವುಗಳಿಗೆ ಮಾರಕವಾದ ಕಾಯಿಲೆ ಬಂದು ಈಗ ಈ ರಣಹದ್ದುಗಳು ಅಳಿವಿನಂಚಿನಲ್ಲಿರುವ ಪಕ್ಷಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಈಗ ರಣಹದ್ದು ಕ್ರಮೇಣ ಅಳಿವಿನಂಚಿಗೆ ತಲುಪಿಯಾಗಿದೆ. ಮೂಂದೊಂದು ದಿನ ಸಂಪೂರ್ಣ ಕಣ್ಮರೆಯಾದರು ಅಚ್ಚರಿಯಿಲ್ಲ. ಅಪರೂಪವಾಗುತ್ತಿರುವ ರಣಹದ್ದುಗಳನ್ನು ಉಳಿಸಿಕೊಳ್ಳಬೇಕು ಎಂದು ನಿರ್ಧರಿಸಿರುವ ರಾಜ್ಯ ಸರ್ಕಾರವು ರಾಮನಗರ ಸಮೀಪದಲ್ಲಿರುವ ರಾಮದೇವರ ಬೆಟ್ಟವನ್ನು "ರಣಹದ್ದು ಸಂರಕ್ಷಣ ಪ್ರದೇಶ" ಎಂದು ಘೋಷಿಸಿದೆ. ದೇಶದ ಮೊದಲ ರಣಹದ್ದು ಅಭಯಾರಣ್ಯ ಎಂಬ ಖ್ಯಾತಿಗೆ ಪಾತ್ರವಾಗಿದೆ.

ಈ ಅಕ್ಟೋಬರ್ ತಿಂಗಳ ಸಂಚಿಕೆಗೆ ಜೀವ ವೈವಿಧ್ಯತೆ ಕುರಿತ, ಕಾಡು, ಕಾಡಿನ ಕತೆಗಳು, ಜೀವ ವಿಜ್ಞಾನ, ವನ್ಯ ವಿಜ್ಞಾನ, ಕೀಟಲೋಕ, ಕೃಷಿ, ವನ್ಯಜೀವಿ ಛಾಯಚಿತ್ರಗಳು, ಕವನ (ಪರಿಸರಕ್ಕೆ ಸಂಬಂಧಿಸಿದ), ವರ್ಣಚಿತ್ರಗಳು ಮತ್ತು ಪ್ರವಾಸ ಕತೆಗಳು, ಪರಿಸರಕ್ಕೆ ಸಂಬಂಧ ಪಟ್ಟ ಎಲ್ಲಾ ಲೇಖನಗಳನ್ನು ಆಹ್ವಾನಿಸಲಾಗಿದೆ. ಇ-ಮೇಲ್ ಅಥವಾ ಪೋಸ್ಟ್ ಮೂಲಕ ಕಳಿಸಬಹುದು.

**ಈ ಕೆಳಗಿನ ಇ-ವಿಳಾಸಕ್ಕೆ ಲೇಖನಗಳನ್ನು ಇದೆ ಸೆಪ್ಟೆಂಬರ್ ತಿಂಗಳ ದಿನಾಂಕ 20 ರೊಳಗೆ ನಿಮ್ಮ ಹೆಸರು ಮತ್ತು ವಿಳಾಸದೊಂದಿಗೆ**

kaanana.mag@gmail.com

ಅಥವಾ Study House,

ಕಾಳೇಶ್ವರಿ ಗ್ರಾಮ,

ಆನೇಕಲ್ ತಾಲ್ಲೂಕು,

ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ :560083. ಗೆ ಕಳಿಸಿಕೊಡಬಹುದು.

**- ಅಶ್ವಿನಿ ಎಸ್.**

**ಬೆಂಗಳೂರು**